## ಅವರ ಸಾವೇ ಅಷ್ಟು ಅದ್ಭುತವಾಗಿತ್ತೆಂದರೆ…

ನಮ್ಮ ಪ್ರಾಚೀನರು ಎಂದಿಗೂ ಉದಾಸೀನದ ಬದುಕನ್ನು ಬದುಕಲಿಲ್ಲ. ಅವರ ಜೀವನವೆಲ್ಲ ಸಾಧನೆಯಿಂದ ತುಂಬಿರುತ್ತಿತ್ತು. ಭಗವಂತನನ್ನು ಅನನ್ಯವಾಗಿ ಆರಾಧಿಸುತ್ತಿದ್ದ ಅವರ ಜೀವನದಲ್ಲಿ ಅದ್ಭುತ ಎನಿಸುವಂತಹ ಘಟನೆಗಳು ನಡೆಯುತ್ತಿದ್ದವು. ಶಾಸ್ತ್ರಜ್ಞಾನದಿಂದ ಕೂಡಿದ್ದ ಅವರ ಪ್ರತಿಯೊಂದು ನಡೆ ಮಹತ್ತ್ವದ್ದಾಗಿರುತ್ತಿತ್ತು. ಪ್ರತಿಯೊಂದು ನುಡಿ ಮಂತ್ರತುಲ್ಯವಾಗಿರುತ್ತಿತ್ತು.

ಮತ್ತೂ, ಇದು ಜನರ ಮಧ್ಯದಲ್ಲಿ ಪ್ರಸಿದ್ಧರಾದವರದಷ್ಟೇ ಮಾಹಾತ್ಮ್ಯವಲ್ಲ. ಮಾಧ್ವಪರಂಪರೆಯ ಎಲ್ಲ ಮಹನೀಯರ ಬಗ್ಗೆ ಮಾಧ್ವಸಮಾಜ ಇನ್ನೂ ಪೂರ್ಣವಾಗಿ ತಿಳಿದೇ ಇಲ್ಲ. ಮಾಧ್ವರಲ್ಲಿ ತಿಳಿದಿರುವದು ನೂರರಲ್ಲಿ ಹತ್ತು ಜನರ ಕಥೆ ಮಾತ್ರ. ತಿಳಿದ ಕಥೆಗಳಲ್ಲಿಯೂ ಎಷ್ಟೋ

ಅಪದ್ಧವೇ. ನಮ್ಮ ಪರಂಪರೆಯಲ್ಲಿ ಆಗಿ ಹೋದ ಪ್ರತಿಯೊಬ್ಬರದೂ ಅದ್ಭುತ ಚಾರಿತ್ರ್ಯ, ವಿಸ್ಮಯ ಬರಿಸುವಂತಹ ಜ್ಞಾನ, ಬೆರಗು ಮೂಡಿಸುವಂತಹ ಬದುಕು. ಆ ಮಹನೀಯರ ಬದುಕಿನ ಕುರಿತು ತಮ್ಮತಮ್ಮ ಮಠಗಳಲ್ಲಿರುವ ಅತ್ಯಪೂರ್ವ ದಾಖಲೆಗಳನ್ನು ತೆಗೆದು ತಮ್ಮತಮ್ಮ ಮಠದ ಪೂರ್ವಜರ ಚರಿತ್ರೆಯನ್ನು ಪರಿಣಾಮಕಾರಿಯಾಗಿ ತಮ್ಮ ಶಿಷ್ಯರಿಗೆ ತಿಳಿಸಿಹೇಳಬೇಕಾದ್ದು ಮಠಾಧಿಪತಿಗಳ ಕರ್ತವ್ಯ.

**ಇಂತಹ ಒಂದು ಅಪೂರ್ವ ದಾಖಲೆಯನ್ನು ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಸಂಶೋಧಿಸಿ ಪ್ರಕಟಿಸಿದ್ದಾರೆ. ಅವರ ಆ ಕೆಲಸಕ್ಕೆ ಮಾಧ್ವಸಮಾಜದ ಕೃತಜ್ಞತೆಗಳು ಸಲ್ಲುತ್ತವೆ.** ಮಧ್ವವಿಜಯದ ವ್ಯಾಖ್ಯಾನವಾದ ತನ್ನ ತತ್ವಚಂದ್ರಿಕೆಯ “ಮೊದಲ ಮಾತಿ”ನಲ್ಲಿ ಪ್ರಾಸಂಗಿಕವಾಗಿ ಒಂದು ಅಪೂರ್ವ ಇತಿಹಾಸವನ್ನು ಅವರು ಅನಾವರಣಗೊಳಿಸಿದ್ದಾರೆ.

ಮಾಧ್ವ ಪೀಠಾಧಿಪತಿಗಳ ಬದುಕು ಹೇಗಿರುತ್ತಿತ್ತು, ಶಾಸ್ತ್ರತತ್ವಗಳನ್ನು ಅವರು ಹೇಗೆ ತಮ್ಮ ಜೀವನದಲ್ಲಿ

ಮೈಗೂಡಿಸಿಕೊಂಡು ಬದುಕುತ್ತಿದ್ದರು, ಸಾವನ್ನೂ ಸಹ ಅದೆಷ್ಟು ಅದ್ಭುತವಾಗಿ ಸ್ವಾಗತಿಸುತ್ತಿದ್ದರು ಎನ್ನುವದಕ್ಕೆ ಸಾಕ್ಷಿಯಾಗಿ ನಿಲ್ಲುವಂತಹ ಘಟನೆಯೊಂದನ್ನು ಶ್ರೀ ಪಲಿಮಾರು ಮಠದ ಶ್ರೀ ರಘುವರ್ಯತೀರ್ಥರೇ ಸ್ವಹಸ್ತದಿಂದ ಬರೆದಿಟ್ಟಿರುವ ದಾಖಲೆಯದು.

ಮಾಧ್ವಜ್ಞಾನಿಗಳು ಎಂದರೇ ಒಂದು ವಿಸ್ಮಯದ ಕಡಲು. ರಾಜ ಒಂಟೆಗಳ ಮೇಲೆ ಸಂಪತ್ತನ್ನು ಹೇರಿ ಕಳುಹಿಸಿದರೆ ಅದನ್ನು ಕಡೆಗಣ್ಣಿನಿಂದಲೂ ನೋಡದೇ ಬಂದವರಿದ್ದಾರೆ. ವಿಜಯನಗರ ಸಾಮ್ರಾಜ್ಯದ ಸಿಂಹಾಸನಾಧೀಶ್ವರರಾದರೂ ತಮ್ಮ ಕಾರ್ಯ ಮುಗಿದ ತಕ್ಷಣ ಅಲ್ಲಿಂದ ಕೆಳಗಿಳಿದು ಬಂದ ವಿರಕ್ತಶಿಖಾಮಣಿಗಳಿದ್ದಾರೆ. ಕಾಡಿನ ಮಧ್ಯದಲ್ಲಿ ಕುಳಿತು ತಪಸ್ಸು ಮಾಡಿದವರಿದ್ದಾರೆ. ಗಂಗೆಯನ್ನು ತಾವಿದ್ದಲ್ಲಿಗೆ ಕರೆಸಿದವರಿದ್ದಾರೆ. ದೇವತೆಗಳನ್ನು ಸಾಕ್ಷತ್ಕರಿಸಿಕೊಂಡವರಿದ್ದಾರೆ. ಭಗವಂತನ ಜೊತೆಯಲ್ಲಿ ಹಾಡು ಹಾಡಿ ಕುಣಿದವರಿದ್ದಾರೆ. ನದಿಗಳಲ್ಲಿ ದೇಹತ್ಯಾಗ ಮಾಡಿದವರಿದ್ದಾರೆ. ಉಟ್ಟ ಕೌಪೀನವನ್ನೂ ಕಿತ್ತೊಗೆದು ಹಿಮಾಲಯದ ಪರ್ವತಶ್ರೇಣಿಗಳಲ್ಲಿ

ಮಹಾಪ್ರಸ್ಥಾನಗೈದವರಿದ್ದಾರೆ. ಜೀವಂತವಾಗಿ ವೃಂದಾವನವನ್ನು ಪ್ರವೇಶಿಸಿದ ಮಹಾಮಹಿಮರಿದ್ದಾರೆ. ತಾಯಿಯ ಹಾಲನ್ನೂ ಕುಡಿಯದೇ, ಹುಟ್ಟಿನಿಂದ ಹರಿನ್ನೈವೇದ್ಯವನ್ನು ತಿಂದು ಬೆಳೆದವರು, ಉಪ್ಪು ಖಾರಗಳನ್ನು ತಿನ್ನದೇ ಕೇವಲ ನವಣೆಯನ್ನು ತಿಂದು ಬದುಕಿದವರು. ಗಂಗೆಯಲ್ಲಿ, ಗೋದಾವರಿಯಲ್ಲಿ ಪ್ರಯಾಗದಲ್ಲಿ ಯೋಗಶಕ್ತಿಯಿಂದ ದೇಹತ್ಯಾಗ ಮಾಡಿದವರು. ದೇಹತ್ಯಾಗ ಮಾಡಿದ ಮೇಲೂ ಶಿಷ್ಯರನ್ನು ಅನುಗ್ರಹಿಸುತ್ತಿರುವ ಮಹಾಮಹಿಮರು ನಮ್ಮ ಮಾಧ್ವಪರಂಪರೆಯ ಜ್ಞಾನಿಗಳು. ಅವರ ಬದುಕೂ ಅದ್ಭುತ. ಅವರ ಸಾವೂ ಅದ್ಭುತ. ಅವರ ಬರವಣಿಗೆಯಂತೂ ಅತ್ಯದ್ಭುತ.

ಮತ್ತೆ ಹೇಳುತ್ತೇನೆ, ಇದು ಕೇವಲ ಒಬ್ಬಿಬ್ಬರ ಚರಿತ್ರೆಯಲ್ಲ. ನಮ್ಮ ಮಾಧ್ವಪರಂಪರೆಯ ಎಲ್ಲ ಮಹನೀಯರೂ ಹೀಗೆಯೇ ಬದುಕಿದವರು. ಇಂದಿನವರೆಗೆ ಯಾವ ಮಾಧ್ವನೂ ಹೆಸರೇ ಕೇಳಿರದ ಒಬ್ಬ ಮಹನೀಯರ ಬಗ್ಗೆ, ಅಲ್ಲ ಅವರ ಸಾವಿನ ಬಗ್ಗೆ ಒಂದು ಘಟನೆಯನ್ನು ನಾವೀಗ ತಿಳಿಯಲಿದ್ದೇವೆ. ಅವರ ಸಾವೇ ಅಷ್ಟು

ಅದ್ಭುತವಾಗಿತ್ತೆಂದರೆ ಇನ್ನವರ ಬದುಕು ಅದೆಷ್ಟು ಅದ್ಭುತವಾಗಿತ್ತು ಎಂದು ನಾವು ಊಹಿಸಬಹುದು. ಬದುಕಿನ ಕಟ್ಟಕಡೆಯ ಕ್ಷಣದಲ್ಲಿ ಅವರಿಗಿದ್ದ ಮಾನಸಿಕ ಚೈತನ್ಯ ಉತ್ಸಾಹಗಳ ಕುರಿತು ಕೇಳಿದಾಗ ಆ ಸಿದ್ಧಿಯನ್ನು ಗಳಿಸಲೋಸುಗ ಆ ಮಹನೀಯರು ತಮ್ಮ ಬದುಕಿನ ಪ್ರತೀಕ್ಷಣವನ್ನು ಅದ್ಧೇಗೆ ಸವೆಸಿದ್ದರು ಎಂದು ಅರ್ಥವಾಗುತ್ತದೆ.

ಶ್ರೀಮದಾಚಾರ್ಯರು ಆರಂಭಿಸಿದ ಏನು ಉಡುಪಿಯ ಅಷ್ಟಮಠಗಳಿವೆ, ಆ ಮಠಗಳಲ್ಲಿ ಸುಮಾರು ಹತ್ತು ಹದಿನೈದು ತಲೆಮಾರಿನವರೆಗೆ ಕೇವಲ ಮಹಾತಪಸ್ವಿಗಳೇ ಆಗಿಹೋಗಿದ್ದಾರೆ. ಆಚಾರ್ಯಕರಾರ್ಚಿತ ಪ್ರತಿಮೆಗಳನ್ನು ಪೂಜಿಸುತ್ತ, ಆಚಾರ್ಯಪ್ರತಿಷ್ಠಾಪಿತ ಶ್ರೀಕೃಷ್ಣನನ್ನು ಆರಾಧಿಸುತ್ತ, ಆಚಾರ್ಯರ ಶಾಸ್ತ್ರವನ್ನು ಇಡಿಯ ಜೀವನದಲ್ಲಿ ಅನುಷ್ಠಾನ ಮಾಡುತ್ತ ಬದುಕಿದ ಮಹನೀಯರು. ಮೊದಲ ಏಳೆಂಟು ತಲೆಮಾರಿನ ಸುಮಾರು ಯತಿವರೇಣ್ಯರು ಉಡುಪಿಯ ಬಳಿಯಲ್ಲಿ ದೇಹತ್ಯಾಗವನ್ನು ಮಾಡಲಿಲ್ಲ. ಆಚಾರ್ಯರು ಮಹಾಭಾರತತಾತ್ಪರ್ಯ-ನಿರ್ಣಯದಲ್ಲಿ ತಿಳಿಸಿದಂತೆ ತಮ್ಮ ಸಾವನ್ನೂ ಸಹ

ಅವರು ಸಾಧನೆಯನ್ನಾಗಿ ಮಾಡಿಕೊಂಡವರು. ಕೆಲವರು ಗಂಗೆಯಲ್ಲಿ, ಕೆಲವರು ಗೋದಾವರಿಯಲ್ಲಿ, ಕೆಲವರು ಕಾವೇರಿಯಲ್ಲಿ, ಕೆಲವರು ಪ್ರಯಾಗದಲ್ಲಿ, ಕೆಲವರು ಅಯೋಧ್ಯೆಯಲ್ಲಿ ತಮ್ಮ ಯೋಗಸಾಮರ್ಥ್ಯದಿಂದ ದೇಹತ್ಯಾಗವನ್ನು ಮಾಡಿದವರು. ಪಲಿಮಾರು ಮಠದ ಮೂಲಯತಿಗಳಾದ ಶ್ರೀ ಹೃಷೀಕೇಶತೀರ್ಥರು ಕಾಶಿಯಲ್ಲಿ ಗಂಗಾಪ್ರವೇಶವನ್ನು ಮಾಡಿದವರು. ಅದಮಾರು ಮಠದ ಶ್ರೀನರಸಿಂಹತೀರ್ಥರೂ ಸಹ ಗಂಗೆಯಲ್ಲಿ ದೇಹತ್ಯಾಗವನ್ನು ಮಾಡಿದವರು. ಪುತ್ತಿಗೆ ಮಠದ ಶ್ರೀ ಉಪೇಂದ್ರತೀರ್ಥರು ಕೃಷ್ಣಾನದಿಯಲ್ಲಿ. ಶೀರೂರು ಮಠದ ಶ್ರೀವಾಮನತೀರ್ಥರು ಗಂಗಾಯಮುನಾಸಂಗಮದಲ್ಲಿ. ಕಾಣಿಯೂರು ಮಠದ ಶ್ರೀರಾಮತೀರ್ಥರು ಹಿಮಾಲಯವನ್ನು ಪ್ರವೇಶಿಸಿದವರು. ಪೇಜಾವರ ಮಠದ ಶ್ರೀ ಅಧೋಕ್ಷಜತೀರ್ಥರು ರಾಮೇಶ್ವರದ ಬಳಿಯ ಧನುಷ್ಕೋಟಿಯಲ್ಲಿ.

ಇವೆಲ್ಲ ಕೇವಲ ಉದಾಹರಣೆಯಷ್ಟೇ. ಉಡುಪಿ ಮಠಗಳ ಮೊದಲ ಏಳೆಂಟು ತಲೆಮಾರಿನಲ್ಲಿ

ಎಲ್ಲರೂ ಯೋಗಶಕ್ತಿಯಿಂದ ತಮ್ಮ ದೇಹತ್ಯಾಗವನ್ನು ಮಾಡಿದವರೇ. ಸಾವು ಅವರನ್ನು ಕಾಡಿಸದಷ್ಟು ಅವರ ಬದುಕು ಅದ್ಭುತವಾಗಿತ್ತು. ಇನ್ನು ಯಾರು ಸಹಜವಾದ ಸಾವನ್ನು ಪಡೆದರೋ ಅವರೂ ಸಹ ತುಂಬ ಸಂಭ್ರಮದಿಂದ ಸಾವನ್ನು ಸ್ವಾಗತಿಸಿದವರು. ತಮ್ಮ ಸಾವನ್ನೂ ಸಾಧನೆಯನ್ನಾಗಿ ಮಾಡಿಕೊಂಡವರು. **ಅಂತಹ ಒಂದು ಘಟನೆಯನ್ನು ನಾವು ಪಲಿಮಾರು ಮಠದ ಶ್ರೀ ರಘೂತ್ತಮತೀರ್ಥರ ಚರಿತ್ರೆಯಲ್ಲಿ ಕೇಳುತ್ತೇವೆ.** ಅವರ ಸಾವಿನ ಪರಿಯನ್ನು ಅವರ ಪ್ರಶಿಷ್ಯರಾದ ಶ್ರೀ ರಘುವರ್ಯತೀರ್ಥರು ದಾಖಲಿಸಿ ಇಟ್ಟಿದ್ದಾರೆ. ಶ್ರೀ ರಘೂತ್ತಮತೀರ್ಥರು ಶ್ರೀ ಹೃಷೀಕೇಶತೀರ್ಥರಿಂದ ಹತ್ತೊಂಭತ್ತನೆಯವರು. ಅಯೋಧ್ಯೆಯಲ್ಲಿ ದೇಹತ್ಯಾಗ ಮಾಡಿದ ಶ್ರೀ ರಘುನಾಥತೀರ್ಥರು ಅವರ ಗುರುಗಳು. ಕಾಶಿಯಲ್ಲಿ ದೇಹತ್ಯಾಗ ಮಾಡಿದ ಶ್ರೀ ರಘುಪತಿತೀರ್ಥರು ಅವರ ಪರಮಗುರುಗಳು. ಇಂತಹ ತಪಸ್ವಿಪರಂಪರೆಯಲ್ಲಿ ಬಂದಿದ್ದ ಆ ರಘೂತ್ತಮತೀರ್ಥರ ಬದುರು ಸಹಜವಾಗಿಯೇ ಅದ್ಭುತವಾಗಿತ್ತು.

ಆ ದಿವಸ, 4833 ನೇ ಕಲಿವರ್ಷ. ಶಾಲೀವಾಹನ ಶಕೆಯ 1654ನೇ ವರ್ಷ.  ಪರಿಧಾವಿ ಸಂವತ್ಸರ. ಆಶ್ವೀನ ಮಾಸ. ಶುಕ್ಲಪಕ್ಷದ ಪಂಚಮಿ, (24-09-1732) ಈ ದಿನದ ಮಧ್ಯರಾತ್ರಿಗಿಂತಲೂ ಮುಂಚೆ ತಮ್ಮ ಮರಣವಾಗುತ್ತದೆ ಎಂದು ಶ್ರೀ ರಘೂತ್ತಮತೀರ್ಥರು ಮೊದಲೇ ತಿಳಿದುಕೊಂಡಿದ್ದರು.  ಇಡಿಯ ಬದುಕನ್ನು ಭಗವನ್ಮಯವಾಗಿ ಕಳೆದ ಅವರಿಗೆ, ಶಾಸ್ತ್ರತತ್ವದ ಮಹತ್ತರ ಪರಿಣಾಮವನ್ನು ಮಾಡಿಕೊಂಡಿದ್ದ ಅವರಿಗೆ ಈ ರೀತಿಯಾದ ಸಾಮರ್ಥ್ಯವಿದ್ದದ್ದು ಅತಿಶಯವಲ್ಲ. ಅತಿಶಯ ಎನಿಸುವದು ಆ ದಿವಸವನ್ನು ಅವರು ಕಳೆದ ರೀತಿ.

ಶ್ರೀ ರಘೂತ್ತಮತೀರ್ಥರ ಶಿಷ್ಯರು ಶ್ರೀ ರಾಮಭದ್ರತೀರ್ಥರು. ಅವರ ಶಿಷ್ಯರು ಶ್ರೀ ರಘುವರ್ಯತೀರ್ಥರು. ಉಡುಪಿಯ ಮಠಗಳಲ್ಲೇನು ಬಾಲಸಂನ್ಯಾಸದ ಪದ್ಧತಿಯಿದೆ, ಅದೊಂದು ತುಂಬ ದೂರಾಲೋಚನೆಯಿಂದ ನಿರ್ಮಾಣವಾದ ಒಂದು ಪದ್ಧತಿ. ಒಂದೇ ಕಾಲಕ್ಕೆ ಮಠದಲ್ಲಿ ಮೂರು ಜನ ಸಂನ್ಯಾಸಿಗಳು ವಾಸ ಮಾಡುತ್ತಿದ್ದರು. ಏಳೆಂಟು ವರ್ಷದ

ವಯಸ್ಸಿನಲ್ಲಿಯೇ ಸಂನ್ಯಾಸ. ಆಗಿನ ಕಾಲದ ಸಂನ್ಯಾಸ ಎಂದರೆ ಇವತ್ತಿನ ಹಾಗೆ ಲಾಬಿಯಿಂದ ನಡೆಯುತ್ತಿದ್ದುದಲ್ಲ. ಆಸ್ತಿ ಗೌರವಗಳ ದುರಾಸೆಗಾಗಿ ಗುರುಗಳಿಂದ ಕಿತ್ತುಕೊಳ್ಳುತ್ತಿದ್ದುದಲ್ಲ. ಹೆಂಡತಿಯ ತಮ್ಮನಿಗೆ, ತಂಗಿಯ ಗಂಡನಿಗೆ, ಅಕ್ಕನ ಭಾವನಿಗೆ ನೀಡುತ್ತಿದ್ದುದಲ್ಲ. ಆಗಿನ ಕಾಲದ ಪ್ರತಿಯೊಬ್ಬ ಸಂನ್ಯಾಸಿಗೂ ತಾವು ಕುಳಿತ ಪೀಠದ ಹಿರಿಮೆಯ ಎಚ್ಚರ ಸದಾ ಇರುತ್ತಿತ್ತು. ಸರ್ವಜ್ಞಪೀಠದ ಗೌರವಕ್ಕೆ ಕುಂದು ಬಾರದ ಹಾಗೆ ಅವರ ನಡೆ, ನುಡಿ, ಆಲೋಚನಗಳಿರುತ್ತಿದ್ದವು. ಗುರುಗಳು ಸಂನ್ಯಾಸ ನೀಡುವಾಗಲಂತೂ ಶಿಷ್ಯನ ಯೋಗ್ಯತೆಯನ್ನು ಅರಿತೇ ನೀಡುತ್ತಿದ್ದರು. ಎಲ್ಲದಕ್ಕಿಂತ ಹೆಚ್ಚಿನದಾಗಿ **“ಸಿದ್ಧಿವಿಘ್ನಮುಖದೋಷಭೇಷಜ”**ನಾದ ಶ್ರೀಕೃಷ್ಣನ ಕೈಂಕರ್ಯವನ್ನು ಮಾಡುತ್ತ, ಮಧ್ವಶಾಸ್ತ್ರದ ಅಧ್ಯಯನ ಅಧ್ಯಾಪನಗಳನ್ನು ಮಾಡಿ ತಮ್ಮ ಮುಕ್ತಿಮಾರ್ಗವನ್ನು ನಿಷ್ಕಂಟಕವನ್ನಾಗಿ ಮಾಡಿಕೊಳ್ಳಲಿಕ್ಕಾಗಿಯೇ ಶ್ರೇಷ್ಠ ಜೀವರು ಅವತರಿಸಿ ಬರುತ್ತಿದ್ದರು. ಹೀಗಾಗಿ ಅಂತಹ ಉತ್ತಮ ಜೀವನಿಗೆ ಕೌಮಾರದಲ್ಲಿಯೇ ಸಂನ್ಯಾಸವನ್ನು ನೀಡಿದರೂ ಆತ ಎಂದಿಗೂ

ದಾರಿತಪ್ಪಲಿಕ್ಕೆ ಸಾಧ್ಯವಿರುತ್ತಿರಲಿಲ್ಲ. ದಾರಿತಪ್ಪುತ್ತಿರಲಿಲ್ಲ. ಯಾರೂ ದಾರಿ ತಪ್ಪಿಲ್ಲ.

ಹೀಗೆ ಬಾಲ್ಯದಲ್ಲಿ ಸಂನ್ಯಾಸವನ್ನು ನೀಡಿದರೆ ಅವರಿಗೆ ಶಿಕ್ಷಣವನ್ನು ನೀಡಲಿಕ್ಕಾಗಿಯೇ ಅವರ ಪರಮಗುರುಗಳು ಕಾದಿರುತ್ತಿದ್ದರು. ಅವರಿಗಾಗ ಸಾಮಾನ್ಯ ಐವತ್ತು ಐವತ್ತೈದು ವರ್ಷ ವಯಸ್ಸಿರುತ್ತಿತ್ತು. ಬಾಲ್ಯದಲ್ಲಿಯೇ ಗುರುಗಳಿಂದ ಸಂನ್ಯಾಸವನ್ನು ಸ್ವೀಕರಿಸಿ, ಹತ್ತಾರು ವರ್ಷಗಳ ಕಾಲ ತಮ್ಮ ಪರಮಗುರುಗಳ ಬಳಿ ಅಧ್ಯಯನವನ್ನು ಮಾಡಿ, ಮೂವತ್ತು ಮೂವತ್ತೈದು ವರ್ಷಗಳ ಕಾಲ ಶ್ರೀಕೃಷ್ಣನನ್ನು ಅನನ್ಯವಾಗಿ ಆರಾಧಿಸುತ್ತಿದ್ದ ಅವರು ತಮ್ಮ ವೃದ್ಧಾಪ್ಯದ ಹೊಸ್ತಿಲಿನಲ್ಲಿ, ಕೃಷ್ಣಪೂಜೆಯ ಜವಾಬ್ದಾರಿಯನ್ನು ತಮ್ಮ ಶಿಷ್ಯರಿಗೊಪ್ಪಿಸಿ ಪ್ರಶಿಷ್ಯನ ತಯಾರಿಗಾಗಿ ನಿಲ್ಲುತ್ತಿದ್ದರು. ಹೀಗೆ ಹಿರಿಯಸ್ವಾಮಿಗಳ ಸುಮಾರು ಅರ್ಧಶತಮಾನದ ಅನುಭವ ಈ ಕಿರಿಯ ಸಂನ್ಯಾಸಿಗೆ ಸುಲಭವಾಗಿ ದೊರೆತುಬಿಡುತ್ತಿತ್ತು. ಆ ಪರಮಗುರುಗಳ ಬಳಿಯಲ್ಲಿ ಸುಮಾರು ಹತ್ತಿಪ್ಪತ್ತು ವರ್ಷಗಳ ಕಾಲ ನಿರಂತರ ಅಧ್ಯಯನ ಮಾಡಿದ ಬಳಿಕ ಈ ಕಿರಿಯ ಸಂನ್ಯಾಸಿ ತಮ್ಮ ತುಂಬು

ತಾರುಣ್ಯದಲ್ಲಿ ತಮ್ಮ ಗುರುಗಳಿಂದ ಕೃಷ್ಣಪೂಜೆಯ ಅಧಿಕಾರವನ್ನು ಸ್ವೀಕರಿಸುತ್ತಿದ್ದರು. ಒಂದೆರಡು ವರ್ಷಗಳ ಕಾಲ ಶಿಷ್ಯನಿಗೆ ಶ್ರೀಕೃಷ್ಣಪೂಜೆಯ ಪರಿಪೂರ್ಣ ಶಿಕ್ಷಣವನ್ನು ನೀಡಿ, ಶಿಷ್ಯನಿಂದ ಮತ್ತೊಬ್ಬ ಮಹನೀಯ ವಟುವಿಗೆ ಸಂನ್ಯಾಸವನ್ನು ನೀಡಿಸಿ ಆ ಗುರುಗಳು ತಮ್ಮ ಪ್ರಶಿಷ್ಯರ ತಯಾರಿಯಲ್ಲಿ ತೊಡಗಿಕೊಳ್ಳುತ್ತಿದ್ದರು.

ಹೀಗೆ ಅಧ್ಯಯನಕ್ಕಾಗಿ ಬಾಲ್ಯ ಮತ್ತು ತಾರುಣ್ಯ, ಕೃಷ್ಣಪೂಜೆಗಾಗಿ ಮಧ್ಯವಯಸ್ಸು. ಅಧ್ಯಾಪನಕ್ಕಾಗಿ ಮುಂದಿನ ಬಾಳು. ವೃದ್ಧಸಂನ್ಯಾಸಿ, ತರುಣಸಂನ್ಯಾಸಿ. ಬಾಲಸಂನ್ಯಾಸಿ. ಮೂರುಮೂರು ಜನ ಸಂನ್ಯಾಸಿಗಳು ಏಕಕಾಲಕ್ಕೆ ಭಗವದಾರಾಧನಾತತ್ಪರರಾಗಿರುತ್ತಿದ್ದರು. ನಮ್ಮ ಪರಂಪರೆಯಲ್ಲಿ ಎಂಥ ಅದ್ಭುತ ವ್ಯವಸ್ಥೆಯಿತ್ತು ನೋಡಿ.

ಶ್ರೀ ರಘೂತ್ತಮತೀರ್ಥರು ವೃದ್ಧಾಪ್ಯದಲ್ಲಿದ್ದಾಗ ಅವರ ಶಿಷ್ಯರು ಶ್ರೀ ರಾಮಭದ್ರತೀರ್ಥರು ಶ್ರೀಕೃಷ್ಣಪೂಜಾಸಕ್ತರಾಗಿದ್ದರು. ಅವರ ಶಿಷ್ಯರಾದ ಶ್ರೀ ರಘುವರ್ಯತೀರ್ಥರು ಪರಮಗುರುಗಳಾದ ಶ್ರೀ

ರಘೂತ್ತಮತೀರ್ಥರ ಬಳಿಯಲ್ಲಿ ಶಾಸ್ತ್ರಾಧ್ಯಯನವನ್ನು ಮುಗಿಸಿ ಆ ವೃದ್ಧಯತಿಗಳ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ ವಿದ್ಯಾಗುರುಗಳೂ, ತಮ್ಮ ಪರಮಗುರುಗಳೂ ಆದ ಆ ರಘೂತ್ತಮತೀರ್ಥರು ದೇಹನಿರ್ಯಾಣ ಮಾಡಿದ ಕ್ರಮವನ್ನು ಕಣ್ಣಿಗೆ ಕಟ್ಟುವಂತೆ ಆ ರಘುವರ್ಯತೀರ್ಥರು ದಾಖಲಿಸಿ ಇಟ್ಟಿದ್ದಾರೆ. ಎಂಟು ಶ್ಲೋಕಗಳಲ್ಲಿ ಆ ಘಟನೆಯನ್ನು ನಿರೂಪಿಸಿ ತಮ್ಮ ಸ್ವಹಸ್ತದಿಂದಲೇ ಬರೆದಿಟ್ಟಿರುವದು ಇಂದಿಗೂ ಪಲಿಮಾರು ಮಠದಲ್ಲಿದೆ ಎಂದು ಗೋವಿಂದಾಚಾರ್ಯರು ತಿಳಿಸುತ್ತಾರೆ. ಶ್ರೀರಘುವರ್ಯತೀರ್ಥರು ಬರೆದಿಟ್ಟ ಇತಿಹಾಸವಿದು —

**ನಿಶ್ಚಿತ್ಯೋತ್ಕ್ರಮಣಂ ರಘೂತ್ತಮಮುನಿಃ**
**ಶಿಷ್ಯಪ್ರಶಿಷ್ಯೌ ಯತೀ**
**ಕರ್ತವ್ಯಾನ್ಯನುಶಾಸ್ಯ ಶಾಸ್ತ್ರವಿಧಿನಾ**
**ಸ್ನಾತ್ವಾಽಥ ಜಪ್ತ್ವಾ ಮನೂನ್ ।**
**ಸಂಪೂಜ್ಯಾಥ ರಘುಪ್ರವೀರಮಮಲಂ**
**ನೈವೇದ್ಯಮನ್ನಂ ಹರೇಃ**
**ಭುಕ್ತ್ವಾಽಽಚಮ್ಯ ಸಮಾಗತಾನ್ ಪ್ರಿಯಜನಾನ್**

ಅಂತ್ಯೇಪ್ಯಿಯತ್ನೇಽದಿಶತ್ ।।
ಭುಕ್ತ್ವಾಸ್ವಾಂತಿಕಮಾಗತೇಷು
ಸುಜನೇಷ್ವಾರ್ಯಾನ್ ಸುರಾನ್ ತತ್ವಪಾನ್
ಅಸ್ಮಾರ್ಷೀದ್ ರಘುಪಂ ಚ ಸರ್ವಶರಣಂ
ದ್ವೈಪಾಯನಂ ಗ್ರಂಥಗಮ್ ।
ಕುರ್ವನ್ನಂಜಲಿಬಂಧಮಾತ್ಮವಚಸಾ
ಶಿಷ್ಯಪ್ರಶಿಷ್ಯಾರ್ಪಿತಂ
ತೀರ್ಥಂ ದೇವಸರಿತ್ವಯಶ್ಚ ಸ ಪಪೌ
ಸ್ತೋತ್ರಾಣಿ ಶೃಣ್ವನ್ ಮುದಾ ।

ಧ್ಯಾಯನ್ ವಂಶಧರಸ್ಯ ಚಾಂಸಯುಗಳೇ
ನ್ಯಸ್ಯಾತ್ಮಹಸ್ತೌ ಹರಿಂ
ಶೋಕಂ ಕುರ್ವತಿ ತತ್ರ ಸರ್ವಸುಜನೇ
ಹಸ್ತೇನ ಸೋಽವಾರಯತ್ ।
ಸಾಯಂ ತರ್ಪಣಮಾರಚಯ್ಯ ಯತಿನಾ
ಶಿಷ್ಯೇಣ ಸಾಕಂ ಹರೇಃ
ಪೂಜಾರ್ಥಂ ನಿಜಶಿಷ್ಯಶಿಷ್ಯಮದಿಶತ್
ಶೀಘ್ರೇಣ ಪೂಜಾಸ್ತ್ವಿತಿ ।।

ಪೂಜಾನಂತರಮಾವಸತ್ಸು ಸುಜನೇಷ್ವಾ-
ತ್ಮಾಂತಿಕಂ ಮಂದವಾಕ್

ಕಾರ್ಯಂ ಶ್ರೀಹರಿನಾಮಕೀರ್ತನಮಿತಿ
ಪ್ರೋವಾಚ ಸಚ್ಛಾಸ್ತ್ರವಿತ್ ।
ಶೃಣ್ವನ್ ಶ್ರೀಹರಿನಾಮಕೀರ್ತನಮಥೋ
ಶುಭ್ರೋರ್ಧ್ವಪುಂಢ್ರಾಂಕಿತಃ
ಸದ್ವೀರಾಸನಭೂಷಿತಃ ಪುನರಪಾತ್
ಲಕ್ಷ್ಮೀಶಪಾದೋದಕಮ್ ।।

ಶ್ರೀಕೃಷ್ಣಾರ್ಪಿತಸತ್ತುಳಸಿಕಾಮಾಲಾ
ಯುಂತಾಗಸ್ತದಾ
ಪೂರ್ವಾನುಷ್ಠಿತಸತ್ಕ್ರಿಯಾಯುತ
ಹರಿಧ್ಯಾನಾದಿಯೋಗಾದ್ ವದನ್ ।
ದುಷ್ಕರ್ಮಾಮಯಭೇಷಜಂ ಹರಿಪದಂ ಪಶ್ಚಾತ್
ನೃಸಿಂಹಾಭಿದಂ
ಯೋಗೀ ಪ್ರಾಪ ರಘೂತ್ತಮೋ ಹರಿಪದಂ
ಮಾಸೇ ಶರದ್ಯಾದಿಕೇ ।।

ವರ್ಷೇಽಸ್ಮಿನ್ ಪರಿಧಾವಿನಾಮ್ನಿ ತರಣೌ ಕನ್ಯಾಂ
ಗತೇ ವಾಸರೇ
ಸೌರೇ ಕೇಸರಿನಾಮಕೇ ಸುಕರಣೇ
ಪ್ರೀತ್ಯಾಖ್ಯಯೋಗೇ ತಥಾ ।

ಪಂಚಮ್ಯಾಂ ಸುತಿಥೌ ರಘೂತ್ತಮಮುನಿಃ
ಶುಕ್ಲಾಖ್ಯಪಕ್ಷೇ ಶುಭೇ
ಮೈತ್ರ್ಯಕ್ಷೇ ಹರಿಲೋಕಮಾಪ ರಘುಪಂ
ಧ್ಯಾಯನ್ ನಿಶಾಯಾಂ ಮುದಾ ।।

ನಿತ್ಯಂ ಸ್ನಾನಜಪಾದಿಕರ್ಮನಿರತಂ
ಸತ್ಕಾಷ್ಠಮೌನಾನ್ವಿತಂ
ವ್ಯಾಖ್ಯಾಂತಂ ಸುಖತೀರ್ಥಶಾಸ್ತ್ರಮತುಲಂ
ಕಾಮಾದಿದೋಷೋಜ್ಝಿತಮ್ ।
ಸೀತಾನಾಥಪದಾರ್ಚನೈಕಮನಸಂ ಶುದ್ಧಂ
ದಯಾಸಾಗರಂ
ವಂದೇಽಹಂ ಸತತಂ ರಘೂತ್ತಮಗುರುಂ
ಜ್ಞಾನಾದಿಸುಶ್ರೇಯಸೇ ।।

ಸ್ನಾನಮೌನಹರಿಧ್ಯಾನ
ಶಾಸ್ತ್ರವ್ಯಾಖ್ಯಾನಭೂಷಿತಾನ್ ।
ವಂದೇ ರಘೂತ್ತಮಗುರೂನ್
ನಿಜಕಲ್ಪತರೂನ್ ಸದಾ ।।

ಶ್ರೀ ರಘುವರ್ಯತೀರ್ಥಕೃತಂ ಶ್ಲೋಕಾಷ್ಟಕಮ್ ।

ಈ ಎಂಟು ಶ್ಲೋಕಗಳ ಒಟ್ಟು ಭಾವವಿದು —

ತಮ್ಮ ನಿರ್ಯಾಣದ ಕಾಲವನ್ನು ನಿಖರವಾಗಿ ಅರಿತಿದ್ದ ಶ್ರೀ ರಘೂತ್ತಮಮುನಿಗಳು ತಮ್ಮ ಶಿಷ್ಯರಾದ, ಶ್ರೀಕೃಷ್ಣಪೂಜಾದಿಗಳಿಗೆ ಉತ್ತರಾಧಿಕಾರಿಗಳಾದ ಶ್ರೀ ರಾಮಭದ್ರತೀರ್ಥರನ್ನು ಮತ್ತು ತಮ್ಮ ವಿದ್ಯಾಶಿಷ್ಯರೂ ಪ್ರಶಿಷ್ಯರೂ ಆದ ಪ್ರೀತಿಯ ಶ್ರೀ ರಘೂತ್ತಮತೀರ್ಥರನ್ನು ಹತ್ತಿರ ಕರೆದು ಅವರಿಬ್ಬರೂ ಮುಂದೆ ಮಾಡಬೇಕಾದ ಭಗವದಾರಾಧನಾದಿ ಕರ್ತವ್ಯಗಳನ್ನು ಉಪದೇಶಿಸುತ್ತಾರೆ.

ಪರಿಧಾವಿನಾಮ ಸಂವತ್ಸರ, ಸೂರ್ಯನು ಕನ್ಯಾರಾಶಿಯಲ್ಲಿದ್ದಾನೆ, ಆಶ್ವಯುಜ ಮಾಸ, ಬವಕರಣ, ಪ್ರೀತಿಯೋಗ, ಅನೂರಾಧಾನಕ್ಷತ್ರ, ಪಂಚಮೀತಿಥಿ. ಆ ದಿನದಂದೂ ಸಹ ತಮ್ಮ ಇಡಿಯ ಜೀವನದಲ್ಲಿ ಆಚರಿಸಿಕೊಂಡು ಬಂದಂತೆ ಬೆಳಗಿನ ಜಾವದಲ್ಲಿಯೇ ಎದ್ದು ವಿಧ್ಯುಕ್ತವಾದ ಕ್ರಮದಲ್ಲಿ ಶ್ರೀ ರಘೂತ್ತಮತೀರ್ಥರು ಸ್ನಾನ ಮಾಡುತ್ತಾರೆ. ಪ್ರಣವ,

ಅಷ್ಟಮಹಾಮಂತ್ರಾದಿಶ್ರೇಷ್ಠಮಂತ್ರಗಳನ್ನು ತನ್ಮಯತೆಯಿಂದ ಜಪಿಸುತ್ತಾರೆ.

ಆ ಬಳಿಕ, ಶ್ರೀಮದಾನಂದತೀರ್ಥ-ಭಗವತ್ಪಾದಾಚಾರ್ಯರು ತಮ್ಮ ಪರಂಪರೆಗೆ ಅನುಗ್ರಹಿಸಿದ ಸೀತಾಲಕ್ಷ್ಮಣಸಮೇತ ಶ್ರೀರಾಮಚಂದ್ರನನ್ನು ತಮ್ಮ ಇಡಿಯ ಜೀವದ ಭಕ್ತಿಯಿಂದ ಪೂಜಿಸುತ್ತಾರೆ. **“ಸಂಪೂಜ್ಯ”** ಶ್ರೀಹರಿ ತಮ್ಮ ಮೇಲೆ ಮಾಡಿದ ಭೂರಿ ಅನುಗ್ರಹವನ್ನು, ತಮ್ಮ ಇಡಿಯಿ ಜನ್ಮದಲ್ಲಿ ಮಾಡಿದ ಸಕಲ ಸತ್ಕರ್ಮಗಳನ್ನು ಆ ರಾಮಚಂದ್ರನ ಪಾದಕ್ಕೆ ಸಮರ್ಪಿಸಿ ಭಕ್ತಿಭರದಿಂದ ನಮಸ್ಕರಿಸುತ್ತಾರೆ.

ಆ ನಂತರ ಶ್ರೀರಾಮಚಂದ್ರನಿಗೆ ಅರ್ಪಿಸಿದ ನೈವೇದ್ಯವನ್ನು ಆದರದಿಂದ ಸ್ವೀಕರಿಸಿ, ಆಚಮನ ಮಾಡಿ ಶ್ರೀರಘೂತ್ತಮತೀರ್ಥರು ಆಸನದಲ್ಲಿ ಕುಳಿತುಕೊಂಡರೆ, ಆ ಮಹಾನುಭಾವರ ದರ್ಶನವನ್ನು ಪಡೆಯಲು, ಅವರ ಕಾರುಣ್ಯದ ದೃಷ್ಟಿಯಿಂದ ಪವಿತ್ರರಾಗಲು ಅಲ್ಲಿ ಭಕ್ತಸಮೂಹವೇ ನೆರೆದು ನಿಲ್ಲುತ್ತದೆ.

ತಮ್ಮ ದರ್ಶನಕ್ಕಾಗಿ ಬಂದಿರುವ, ತಮಗೆ ಪ್ರಿಯರಾದ ಆ ವೈಷ್ಣವಗೃಹಸ್ಥಶಿಷ್ಯರಿಗೆ ಶ್ರೀಗಳು ತಮ್ಮ ವೃಂದಾವನಕ್ಕಾಗಿ ಭೂಮಿಯನ್ನು ಅಗೆಯಲು, ಉಳಿದ ಕಡೆಯ ಕಾರ್ಯಗಳಿಗಾಗಿ ಸಿದ್ಧರಾಗಲು ಆದೇಶಿಸುತ್ತಾರೆ. ಗುರುಗಳ ಆದೇಶವನ್ನು ಕ್ಲೇಶದಿಂದ ನಿರ್ವಹಿಸಿ, ಅವರ ಆಜ್ಞೆಯಂತೆ ಭಗವತ್ಪ್ರಸಾದವನ್ನು ಸ್ವೀಕರಿಸಿ ಆ ಎಲ್ಲ ವಿದ್ವಜ್ಜನ, ಸುಹೃಜ್ಜನ ಗುರುಗಳ ಸಮೀಪಕ್ಕೆ ಬರುತ್ತಾರೆ.

ಅವರೆಲ್ಲರ ಸಮ್ಮುಖದಲ್ಲಿ ತಮ್ಮ ಎರಡೂ ಕೈಗಳನ್ನು ಗಟ್ಟಿಯಾಗಿ ಜೋಡಿಸಿ ತಮ್ಮ ಗುರುಗಳನ್ನು ಸ್ಮರಿಸುತ್ತಾರೆ. ಸಮಸ್ತ ಗುರುಪರಂಪರೆಯನ್ನು ನೆನೆಯುತ್ತಾರೆ. ದೇವತೆಗಳ ತತ್ವಾಭಿಮಾನಿದೇವತೆಗಳ ಸ್ತೋತ್ರವನ್ನು ಮಾಡುತ್ತಾರೆ. ಭಕ್ತಿಪೂರ್ಣವಾಗಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರನ್ನು ನೆನೆಯುತ್ತಾರೆ. ತಮ್ಮ ಅರ್ಚಾದೇವ ಶ್ರೀರಾಮಚಂದ್ರನನ್ನು, ಸರ್ವಾತ್ಮನಾ ತಮಗೆ ರಕ್ಷಕನಾದ ಶ್ರೀಕೃಷ್ಣನನ್ನು, ಮತ್ತು ಬ್ರಹ್ಮಸೂತ್ರಗಳಿಂದಾರಂಭಿಸಿ ಸಮಸ್ತ

ತತ್ವವಾದಪ್ರಬಂಧಗಳಲ್ಲಿ ಸನ್ನಿಹಿತನಾದ ಶ್ರೀ ವೇದವ್ಯಾಸರೂಪದ ಭಗವಂತನನ್ನು ಆದರದಿಂದ ಸ್ಮರಿಸುತ್ತಾರೆ.

ಈ ಪರಿ ತಾವು ಸ್ತೋತ್ರ ಮಾಡಿ ನೆರೆದ ವಿದ್ವಜ್ಜನರಿಗೆ ಭಗವತ್ಸ್ತೋತ್ರಗಳನ್ನು ಪಾರಾಯಣ ಮಾಡಲು ಆದೇಶಿಸಿ ತಮ್ಮ ಶಿಷ್ಯಪ್ರಶಿಷ್ಯರಿಗೆ ಪರಮಾತ್ಮನ ಪಾದೋದಕವನ್ನು ಗಂಗಾಜಲವನ್ನು ತಮಗೆ ಕುಡಿಸಲು ಹೇಳುತ್ತಾರೆ. ಹರಿಸ್ತೋತ್ರವನ್ನು ಹೇಳುತ್ತಲೇ ಶ್ರೀ ರಾಮಭದ್ರತೀರ್ಥರು ಮತ್ತು ಶ್ರೀ ರಘುವರ್ಯತೀರ್ಥರು ತೀರ್ಥತುಳಸಿಗಳನ್ನು ಮತ್ತು ಗಂಗೋದಕವನ್ನು ಗುರುಗಳಿಗೆ ಪಾನ ಮಾಡಿಸುತ್ತಾರೆ.

ಸಾವಿನ ಕಾಲ ಹತ್ತಿರವಾಗುತ್ತಿದೆ. ದೇಹ ನಿಧಾನವಾಗಿ ತನ್ನ ಕಸುವನ್ನು ಕಳೆದುಕೊಳ್ಳುತ್ತಿದೆ. ಇಷ್ಟಾದರೂ ಅವರ ಮನಸ್ಸಿನಲ್ಲಿ ದುಗುಡವಿರಲಿಲ್ಲ. ಗಾಭರಿಯಿರಲಿಲ್ಲ. ಅದಕ್ಕಿಂತ ಹೆಚ್ಚಿನದಾಗಿ ಅವರು ಪ್ರಶಾಂತರಾಗಿದ್ದರು ಮತ್ತು ಸಂತೋಷದಿಂದ ಸ್ತೋತ್ರಗಳನ್ನು ಕೇಳುತ್ತ ವಿಷ್ಣುಪಾದೋದಕವನ್ನು ಪಾನ ಮಾಡಿದರು ಎಂದು

ಸ್ವತಃ ಗಂಗೆಯನ್ನು ಕುಡಿಸಿದ ಶ್ರೀರಘುವರ್ಯತೀರ್ಥರು ದಾಖಲಿಸುತ್ತಾರೆ — **“ಪಪೌ ಸ್ತೋತ್ರಾಣಿ ಶೃಣ್ವನ್ ಮುದಾ”** ಎಂದು.

ಇಷ್ಟಾಗುವ ವೇಳೆಗೆ ಮುಂದಿನದನ್ನು ನೆನೆಸಿಕೊಂಡು ನೆರೆದ ಭಕ್ತರಿಗೆ ದುಃಖ ಉಮ್ಮಳಿಸಿ ಬಂದು ಕಂಠ ಗದ್ಗದವಾಗಿ ಕಣ್ಣೀರು ಸುರಿಸುತ್ತಿದ್ದರೆ, ತಮ್ಮ ಎರಡೂ ಕೈಗಳಿಂದ ಶ್ರೀರಾಮಭದ್ರತೀರ್ಥರ ಭುಜಗಳನ್ನು ಹಿಡಿದುಕೊಂಡು ಶ್ರೀಹರಿಯನ್ನು ನೆನೆಯುತ್ತ ಕುಳಿತಿದ್ದ ಶ್ರೀ ರಘೂತ್ತಮತೀರ್ಥರು ಕಣ್ ತೆರೆದು ಕೈಸನ್ನೆ ಮಾಡಿ ಅಳುತ್ತಿದ್ದ ಜನಕ್ಕೆ “ಅಳಬೇಡಿ” ಎಂದು ಆದೇಶಿಸುತ್ತಾರೆ.

ಹೀಗೆ ಸಂಜೆಯವರೆಗೆ ನಿರಂತರವಾಗಿ ವೈಷ್ಣವಸ್ತೋತ್ರಗಳನ್ನು ಶ್ರದ್ಧೆಯಿಂದ ಆಲಿಸಿದ ಶ್ರೀ ರಘೂತ್ತಮತೀರ್ಥರು ಶ್ರೀರಾಮಭದ್ರತೀರ್ಥರ ನೆರವಿನಲ್ಲಿ ಸಾಯಂಸ್ನಾನವನ್ನು ಮಾಡಿ ತಮ್ಮ ಸಂಧ್ಯಾಕರ್ತವ್ಯವನ್ನು ಮುಗಿಸುತ್ತಾರೆ. ಬಳಿಕ ಶ್ರೀರಘುವರ್ಯತೀರ್ಥರನ್ನು ಕರೆದು “ಬೇಗ ಪೂಜೆ ಮುಗಿಸು” ಎಂದು ಆದೇಶಿಸುತ್ತಾರೆ.

ಪೂಜೆಯ ನಂತರ ರಾತ್ರಿಭೋಜನವನ್ನು ಮಾಡಿದ ವಿದ್ವಜ್ಜನರನ್ನೆಲ್ಲ ಹತ್ತಿರ ಕರೆಯಿಸಿದ ಆ ತಪಸ್ವಿವರ್ಯರು, ಅವರೆಲ್ಲರೂ ಕೂಡಿಕೊಂಡು ಶ್ರೀಹರಿನಾಮಸ್ಮರಣೆಯನ್ನು ಮಾಡಬೇಕೆಂದು ಮಂದಧ್ವನಿಯಲ್ಲಿ ಆದೇಶಿಸುತ್ತಾರೆ. ಸ್ವಯಂ ತಾವು ಮಣೆಯ ಮೇಲೆ ವೀರಾಸನದಲ್ಲಿ ಕುಳಿತುಕೊಂಡಿದ್ದಾರೆ. ಮೈಮೇಲೆ ಶೋಭಾಯಮಾನವಾಗಿ ಎದ್ದು ಕಾಣುತ್ತಿರುವ ಶುಭ್ರ ಊರ್ಧ್ವಪುಂಢ್ರಗಳು. ಉಡುಪಿಯಿಂದ ತರಿಸಿದ್ದ, ಶ್ರೀಕೃಷ್ಣನಿಗೆ ಅರ್ಪಿಸಿದ್ದ ತುಳಸೀಮಾಲೆಯನ್ನು ಧರಿಸಿದ್ದಾರೆ. ತಮ್ಮ ಶಿಷ್ಯಪ್ರಶಿಷ್ಯರಿಬ್ಬರ ಕಡೆಯಿಂದ ಮತ್ತೊಮ್ಮೆ ಪರಮಾತ್ಮನ ಪಾದೋದಕವನ್ನು, ಗಂಗೆಯ ಜಲವನ್ನೂ ಪಾನ ಮಾಡುತ್ತಾರೆ.

ಕಿವಿಯಲ್ಲಿ ತುಳಸೀದಳ. ನಾಲಿಗೆಯಲ್ಲಿ ಹರಿನಾಮಸ್ಮರಣೆ. ಉದರದಲ್ಲಿ ಪರಮಾತ್ಮನಿಗರ್ಪಿತವಾಗಿದ್ದ ನೈವೇದ್ಯ. ಕೊರಳಲ್ಲಿ ತುಳಸೀದಳಗಳ ಮಾಲೆ. ಸುತ್ತಲೂ ವಿಷ್ಣುನಾಮಸ್ಮರಣೆ ಮಾಡುತ್ತಿರುವ ವೈಷ್ಣವೋತ್ತಮರು. ಕೈಜೋಡಿಸಿ ಗುರುಗಳ ಬಳಿ

ನಿಂತು ಭಗವನ್ಮಾಹಾತ್ಮ್ಯವನ್ನು ನೆನೆಯುತ್ತಿರುವ ಶಿಷ್ಯದ್ವಯರು. ಮನಸ್ಸಿನಲ್ಲಿ ಮಧ್ವವಲ್ಲಭ ಶ್ರೀಕೃಷ್ಣನ ಮತ್ತು ಮಧ್ವಶಾಸ್ತ್ರದ ಚಿಂತನೆ. ಹೀಗೆ ಕೇವಲ ಒಂದೆರಡು ನಿಮಿಷಗಳಲ್ಲ, ಸುಮಾರು ನಾಲ್ಕೈದು ಗಂಟೆಗಳ ಕಾಲ ತಾವಿದ್ದ ಆ ಸ್ಥಳವನ್ನು ಹರಿಸಂಕೀರ್ತನಮಂದಿರವನ್ನಾಗಿ ಮಾಡಿ ಗಟ್ಟಿಯಾದ ಧ್ವನಿಯಲ್ಲಿ “ಹರೇ ನಾರಸಿಂಹ” ಎಂದು ಭಗವಂತನನ್ನು ನೆನೆದು ಆ ತಪೋಮೂರ್ತಿ ಶ್ರೀರಘೂತ್ತಮತೀರ್ಥರು ದೇಹತ್ಯಾಗವನ್ನು ಮಾಡುತ್ತಾರೆ.[1]

ಇಂತಹ ಒಂದು ಅದ್ಭುತ ಸಾವನ್ನು ನಾವು ಮನಸ್ಸಿನಲ್ಲಿಯೂ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾವು ನೋಡಿರುವ ಸಾವು ಎಂದರೆ, ಅರಚಾಟ, ಕೂಗಾಟ, ಆಕ್ರಂದನ ಇಷ್ಟೇ. ಮುಪ್ಪು ಬಂತೆಂದರೆ ಮನುಷ್ಯ ಹುಚ್ಚುಚ್ಚಾಗಿ ಆಡಲಾರಂಭಿಸುತ್ತಾನೆ. ಸಾವು ಹತ್ತಿರ ಬಂದರೆ ಅದರ ಭಯದಿಂದ ತತ್ತರಿಸಿ ಹೋಗುತ್ತಾನೆ. ಹತ್ತಾರು ಜನ ಡಾಕ್ಟರುಗಳು ಅವನಿಗೆ ಬೇಕು. ಮನೆ ಮಂದಿಯೆಲ್ಲ

---

[1] ಶ್ರೀ ರಘೂತ್ತಮತೀರ್ಥರ ವೃಂದಾವನವಿರುವದು ಶ್ರೀ ಕ್ಷೇತ್ರ ಪಲಿಮಾರಿನಲ್ಲಿ.

ಅವನ ಸೇವೆಗೆ ನಿಲ್ಲಬೇಕು. ಅವನು ಹೇಳಿದ್ದನ್ನೆಲ್ಲ ಕೇಳಬೇಕು. ಕಿವಿ ಕೇಳದಿದ್ದರೂ, ಕಣ್ಣು ಸರಿಯಾಗಿ ಕಾಣದಿದ್ದರೂ ಟೀವಿಯ ಮುಂದೆ ಪ್ರತಿಷ್ಠಾಪಿತನಾದಂತೆ ಕೂತಿರುತ್ತಾನೆ. ಮುಪ್ಪಿಗೆ ತಕ್ಕಂತೆ ಮೈಯೆಲ್ಲ ಮೈಲಿಗೆ. ಅದು ಸಾಲದು ಅಂತ ಮನಸ್ಸೆಲ್ಲ ಕಲ್ಮಷ. ರೋಗದ ನರಳಾಟ. ಏನನ್ನೂ ಅನುಭವಿಸಲಾಗದ ಸಂಕಟ. ತನ್ನ ಹಳೆಯ ಕಥೆಗಳನ್ನೆಲ್ಲ ಹೇಳಿಕೊಳ್ಳುವ ಚಪಲ. ಇಷ್ಟನ್ನು ಬಿಟ್ಟು ನಮಗೆ ಮುದಿತನವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.

ಅಂಥಾದ್ದರಲ್ಲಿ ಶ್ರೀರಘೂತ್ತಮತೀರ್ಥರು ಸಾವಿನ ಸಮಯವನ್ನು ನಿಖರವಾಗಿ ತಿಳಿದು, ಆ ದಿವಸವನ್ನು ತಮಾಮ್ ಉಪಯೋಗಿಸಿಕೊಂಡ ಪರಿಯನ್ನೊಮ್ಮೆ ನೆನೆದರೆ ಮೈ ರೋಮಾಂಚನವಾಗದಿರಲು ಸಾಧ್ಯವೇ ಇಲ್ಲ. ಶ್ರೀ ರಘುವರ್ಯತೀರ್ಥರ ಈ ಶ್ಲೋಕಾವಳಿಗಳನ್ನು ಓದಿದಾಗೆಲ್ಲ, ಯಾವಾಗಲೂ ಏನಾದರೊಂದು ಆಲೋಚನೆಯಲ್ಲಿ ಮುಳುಗಿರುವ ನಾನು ಯೋಚನೆ ಮಾಡುವದನ್ನೂ ನಿಲ್ಲಿಸಿ ಬೆರಗಾಗಿ ಕುಳಿತುಬಿಟ್ಟಿದ್ದೇನೆ.

ದೇವರ ನೈವೇದ್ಯದ ಬಗ್ಗೆ ಆ ರಘೂತ್ತಮತೀರ್ಥರಿಗಿದ್ದ ಆದರ, ದೇವರ ತೀರ್ಥದ, ಗಂಗೆಯ ಬಗೆಗಿದ್ದ ಆದರ, ಗುರುಗಳನ್ನು ಗುರುಪರಂಪರೆಯನ್ನು, ದೇವತೆಗಳನ್ನು, ಭಗವಂತನನ್ನು ಎಲ್ಲದಕ್ಕಿಂತ ಹೆಚ್ಚಿನದಾಗಿ ಗ್ರಂಥಗಳಲ್ಲಿ ಸನ್ನಿಹಿತರಾದ ವೇದವ್ಯಾಸದೇವರನ್ನು ಅವರು ವಂದಿಸಿದ ರೀತಿ, ಸಂಜೆ ತರ್ಪಣವನ್ನು ಮುಗಿಸಿ ಮಧ್ಯರಾತ್ರಿಯವರೆಗೆ, ಪ್ರಾಣ ಬಿಡುವ ಕ್ಷಣದ ವರೆಗೆ ಹರಿನಾಮಸಂಕೀರ್ತನೆಯನ್ನು ಮಾಡಿ ಮಾಡಿಸಿದ ರೀತಿ, ಶಿಷ್ಯರು ಅತ್ತರೆ ಅದನ್ನು ನಿಲ್ಲಿಸಿ "ಹರಿಸ್ತೋತ್ರವನ್ನು ಹೇಳಿ" ಎಂದು ಆದೇಶ ಮಾಡಿದ ಧಾರ್ಷ್ಟ್ಯ ಇವೆಲ್ಲ ಸಾಮಾನ್ಯರಿಗೆ ಸಿದ್ಧಿಸಿವು ಸಿದ್ಧಿಯಲ್ಲ.

ಇದಕ್ಕೆಲ್ಲ ಕಲಶವಿಟ್ಟಂತೆ ಬದುಕಿನ ಕಟ್ಟ ಕಡೆಯ ಕ್ಷಣದಲ್ಲಿ, ಅಕ್ಷರಶಃ ಮೃತ್ಯುವಿನ ದವಡೆಯಲ್ಲಿದ್ದಾಗ ವೀರಾಸನದಲ್ಲಿ ಕುಳಿತು ಅವರು "ಹರೇ ನಾರಸಿಂಹ" ಎಂದು ಭಗವಂತನನ್ನು ನೆನೆದದ್ದು ಮಾತ್ರ ಅತ್ಯದ್ಭುತ. ಅವರ ಇಡಿಯ ಜನ್ಮದ ತಪಸ್ಸಿನ ಪರಿಪಾಕವದು. ಅವರ ಜೀವನಕ್ಕೆ

ಭಗವಂತ ಹಾಕಿದ ಅಂಕಿತವದು. ಬದುಕಿನ ಸಾರ್ಥಕ್ಯದ ಕ್ಷಣವದು. ರಘುವರ್ಯತೀರ್ಥರೇ ಹೇಳಿದಂತೆ — **"ಪೂರ್ವಾನುಷ್ಠಿತಸತ್ಕ್ರಿಯಾ-ಯುತಹರಿಧ್ಯಾನಾದಿಯೋಗಾದ್ ವದನ್"** ಆ ಕ್ಷಣ ಅವರ ಇಡಿಯ ಜನ್ಮದ ತಪಸ್ಸಿಗೆ ಬದುಕಿನ ರೀತಿಗೆ ಸಾಕ್ಷಿಯಾಗಿತ್ತು.

ಭಾಗವತದಲ್ಲಿ ಒಂದು ಮಾತಿದೆ — **"ಜನ್ಮಲಾಭಃ ಪರಃ ಪುಂಸಾಮಂತೇ ನಾರಾಯಣಸ್ಮೃತಿಃ"** ಎಂದು ಭಗವಂತ ಕೊಟ್ಟ ಈ ಬದುಕಿನ ಸಾರ್ಥಕತೆ ಅಂತ್ಯಕಾಲದ ಕ್ಷಣದಲ್ಲಿ ಅಡಗಿದೆಯಂತೆ. ಆ ಹರಿಸ್ಮೃತಿ ಬಂದಿತೋ, ಹುಟ್ಟಿದ್ದು ಬದುಕಿದ್ದು ಸತ್ತಿದ್ದು ಎಲ್ಲವೂ ಸಾರ್ಥಕ. ಆದರೆ ಆ ಹರಿಸ್ಮರಣೆ ಅಕಾಸ್ಮಾತ್ತಾಗಿ ಒದಗಿ ಬರುವದಿಲ್ಲ. ಆಚಾರ್ಯರು ಹೇಳುತ್ತಾರೆ — **"ಸಂತತಂ ಚಿಂತಯೇಽನಂತಮಂತಕಾಲೇ ವಿಶೇಷತಃ"** ಕಡೆಯ ಕಾಲದಲ್ಲಿ ಹರಿಸ್ಮರಣೆ ಒದಗಿಬರಬೇಕಾದರೆ ಇಡಿಯ ಜನ್ಮ ಹರಿಸ್ಮರಣೆ ಮಾಡಬೇಕು. ಭಗವದ್ಗೀತೆ ಹೇಳುವಂತೆ ಸದಾ ತದ್ಭಾವಭಾವಿತನಾಗಿ ಇದ್ದಾಗ ಮಾತ್ರ ಈ ಸಿದ್ಧಿ ಒಲಿಯಲು ಸಾಧ್ಯ

ಶ್ರೀ ಹೃಷೀಕೇಶತೀರ್ಥರ ಪರಂಪರೆಯ ಶೋಭಾಮಣಿಗಳಾದ ಶ್ರೀ ರಘೂತ್ತಮತೀರ್ಥರು ಹಾಗಿದ್ದರು. ನಮ್ಮ ಪರಂಪರೆಯ ನೂರಾರು ಜನ ಮಹನೀಯರು ಹೀಗಿದ್ದರು. ಅವರ ಒಂದು ದಿನದ ಕಥೆಯೇ ಇಷ್ಟು ಹಿರಿಮೆಯನ್ನು ಪಡೆದುಕೊಂಡಿದ್ದಾಗ ಆ ಹಿರಿಯ ಚೇತನದ ಬದುಕು ಇನ್ನೆಷ್ಟು ಅದ್ಭುತವಾಗಿರಲಿಕ್ಕಿಲ್ಲ.

ಶ್ರೀ ರಘುವರ್ಯತೀರ್ಥರು ಅದನ್ನು ದಾಖಲಿಸದೇ ಹೋಗುವದಿಲ್ಲ. ಆರು ಶ್ಲೋಕಗಳಲ್ಲಿ ಒಂದು ದಿನದ ಕಥೆಯನ್ನು ನಿರೂಪಿಸಿ ಒಂದೇ ಶ್ಲೋಕದಲ್ಲಿ ಶ್ರೀರಘೂತ್ತಮತೀರ್ಥರ ಇಡಿಯ ಜೀವನವನ್ನೂ, ಅವರ ಸಾಟಿಯಿಲ್ಲದ ವ್ಯಕ್ತಿತ್ವವನ್ನೂ ನಮಗೆ ಪರಿಚಯಿಸುತ್ತಾರೆ —

**ನಿತ್ಯಂ ಸ್ನಾನಜಪಾದಿಕರ್ಮನಿರತಂ**
**ಸತ್ಕಾಷ್ಠಮೌನಾನ್ವಿತಂ**
**ವ್ಯಾಖ್ಯಾಂತಂ ಸುಖತೀರ್ಥಶಾಸ್ತ್ರಮತುಲಂ**
**ಕಾಮಾದಿದೋಷೋಜ್ಝಿತಮ್ ।**

## ಸೀತಾನಾಥಪದಾರ್ಚನೈಕಮನಸಂ ಶುದ್ಧಂ ದಯಾಸಾಗರಂ
## ವಂದೇSಹಂ ಸತತಂ ರಘೂತ್ತಮಗುರುಂ ಜ್ಞಾನಾದಿಸುಶ್ರೇಯಸೇ ||

“ನನ್ನ ಗುರುಗಳು ಒಂದು ದಿನವೂ ಸ್ನಾನ ಜಪ ಅರ್ಚನೆ ಮುಂತಾದವುಗಳನ್ನು ಬಿಡಲಿಲ್ಲ. ಹರಟೆಯೆಂದರೇನೇ ಗೊತ್ತಿರದಿದ್ದರೂ ಅವರು ಅನೇಕ ಬಾರಿ ಕಾಷ್ಠಮೌನವ್ರತವನ್ನೂ ಆಚರಿಸಿದರು. ಕಾಮ ಅವರನ್ನು ಕಾಡಲಿಲ್ಲ. ಸಿಟ್ಟು ಅವರ ಬಳಿಯಲ್ಲಿ ಸುಳಿಯಲಿಲ್ಲ. ಅವರಿಗೆ ಯಾತರದ್ದೂ ಲೋಭವಿರಲಿಲ್ಲ. ಮದ, ಮಾತ್ಸರ್ಯಗಳ ಬಾಧೆಗೆ ಅವರು ಒಳಗಾಗಲಿಲ್ಲ. ಇಡಿಯ ಜೀವನ ಅವರ ಮನಸ್ಸಿನಲ್ಲಿ ಇದ್ದದ್ದು ಶ್ರೀಕೃಷ್ಣನ ಅರ್ಚನೆಯ ವಾಂಛೆ. ಬಾಹ್ಯ ಅರ್ಚನೆಯ ಜೊತೆಗೆ, ಅದಕ್ಕಿಂತ ಮಿಗಿಲಾಗಿ ಅವರು ಶ್ರೀಮಚಾರ್ಯರ ಶಾಸ್ತ್ರವನ್ನು ಶಿಷ್ಯರಿಗೆ ತಿಳಿ ಹೇಳುತ್ತಿದ್ದರು. ಅವರ ವ್ಯಾಖ್ಯಾನದ ಶೈಲಿ ಅನುಪಮವಾದದ್ದು. ಶ್ರೀರಾಮ-ಶ್ರೀಕೃಷ್ಣರನ್ನು ಅರ್ಚಿಸುತ್ತ ಅವರು ದೇಹಶುದ್ಧಿಯನ್ನು ಪಡೆದುಕೊಂಡಿದ್ದರು. ವೇದವ್ಯಾಸದೇವರ ಮತ್ತು

ಶ್ರೀಮದಾಚಾರ್ಯರ ಗ್ರಂಥಗಳನ್ನು ಅಧ್ಯಯನ ಮಾಡುತ್ತ ಮನಸ್ಸನ್ನು ಶುದ್ಧಿ ಮಾಡಿಕೊಂಡಿದ್ದರು. ಆ ಶಾಸ್ತ್ರವನ್ನು ನಿರಂತರ ಪಾಠ ಹೇಳುತ್ತ ಮಾತನ್ನು ಶುದ್ಧ ಮಾಡಿಕೊಂಡಿದ್ದರು. ಹೀಗೆ ಕಾಯಾ ವಾಚಾ ಮನಸಾ ಅವರು ಶುದ್ಧರಾಗಿದ್ದರು. ಭಕ್ತರ ಮೇಲೆ ಕರುಣೆಯನ್ನು ಹರಿಸುವ ದಯಾಮೂರ್ತಿ ಅವರು. ಅಂತಹ ಶ್ರೀ ರಘೂತ್ತಮತೀರ್ಥರನ್ನು ನಾನು ಜ್ಞಾನ ಭಕ್ತಿ ಮೋಕ್ಷ ಈ ಎಲ್ಲ ಶ್ರೇಯಸ್ಸನ್ನು ಪಡೆಯುವದಕ್ಕಾಗಿ ಎಡೆಬಿಡದೆ ವಂದಿಸುತ್ತೇನೆ.”

ಇದು ಶ್ರೀ ರಘೂತ್ತಮತೀರ್ಥರ ಬದುಕು. ಶ್ರೀ ರಘೂತ್ತಮತೀರ್ಥರ ವ್ಯಕ್ತಿತ್ವ. ಆ ಬದುಕಿನ ಪಾವಿತ್ರ್ಯ, ಆ ವ್ಯಕ್ತಿತ್ವದ ಎತ್ತರವನ್ನು ಇದಕ್ಕಿಂತ ಹೆಚ್ಚಿನದಾಗಿ ವಿವರಿಸುವ ಆವಶ್ಯಕತೆಯಿಲ್ಲ. ಸಾಧ್ಯವೂ ಇಲ್ಲ. ಇನ್ನೇನೇ ಬರೆದರು ಅದು ಈ ಮಾತುಗಳ ವಿಸ್ತಾರವಷ್ಟೇ.

ಆಚಾರ್ಯರ ಶಾಸ್ತ್ರದಲ್ಲಿ ನಮಗೆ ಆಸಕ್ತಿ ಮೂಡಲಿ, ಮೂರ್ಖರ ಸಹವಾಸದಿಂದ ಹೊರಬಂದು ವಿದ್ವಜ್ಜನರ ಮಧ್ಯದಲ್ಲಿ ನಮ್ಮ ಬದುಕು ಸವೆಯುವಂತಾಗಲಿ ಎಂದು ಆ

ಮಹಾನುಭಾವರಾದ ಶ್ರೀ ರಘೂತ್ತಮತೀರ್ಥರನ್ನು ಪ್ರಾರ್ಥಿಸಿಕೊಂಡು, ಆ ಗುರುಗಳ ಹಾದಿಯಲ್ಲಿಯೇ ನಡೆದ ಶ್ರೀ ರಾಮಭದ್ರತೀರ್ಥರನ್ನೂ, ಶ್ರೀ ರಘುವರ್ಯತೀರ್ಥರನ್ನೂ ಆದರದಿಂದ ನೆನೆದು, ಬಂದರೆ ಇಂತಹ ಸಾವು ಬರಲಿ ಎಂದು ಸರ್ವಗುರ್ವಂತರ್ಯಾಮಿಯಾದ ಶ್ರೀಹರಿಯನ್ನು ಬೇಡಿಕೊಳ್ಳೋಣ.

**ಸ್ನಾನಮೌನಹರಿಧ್ಯಾನ**
**ಶಾಸ್ತ್ರವ್ಯಾಖ್ಯಾನಭೂಷಿತಾನ್ ।**
**ವಂದೇ ರಘೂತ್ತಮಗುರೂನ್**
**ನಿಜಕಲ್ಪತರೂನ್ ಸದಾ ।।**

ಸ್ನಾನ, ಮೌನಾಚರಣೆ, ಹರಿಧ್ಯಾನ, ಶಾಸ್ತ್ರ-ವ್ಯಾಖ್ಯಾನ ಮುಂತಾದ ಮಹಾಸದ್ಗುಣಗಳಿಂದ ಭೂಷಿತರಾದ, ಆಶ್ರಯಿಸಿದ ಜನರಿಗೆ ಸಕಲವನ್ನೂ ನೀಡುವ ಕಲ್ಪವೃಕ್ಷರಾದ ಶ್ರೀ ರಘೂತ್ತಮ-ತೀರ್ಥಗುರುಗಳನ್ನು ವಂದಿಸುತ್ತೇನೆ.

ಈ ರೀತಿಯ ಮಹಾನುಭಾವರನ್ನು ನಮ್ಮ ಪರಂಪರೆಯಲ್ಲಿ ಪಡೆದ ನಾವು

ಮಹಾಸೌಭಾಗ್ಯವಂತರು. ಆ ಮಹಾಗುರುಗಳ ಕರುಣೆ ಸದಾ ನಮ್ಮೆಲ್ಲರ ಮೇಲಿದ್ದು ನಾವು ಸಾಧನೆ ಮಾಡಿ ಈ ಸಂಸಾರದ ಬಂಧನದಿಂದ ಮುಕ್ತರಾಗಬೇಕು.

ಈ ಅಪೂರ್ವಚರಿತ್ರೆಯನ್ನು ಕತ್ತಲೆಯ ಕೋಣೆಯಿಂದ ತಂದು ನಮಗೆ ನೀಡಿದ ಶ್ರೀ ಬನ್ನಂಜೆ ಗೋವಿಂದಾಚಾರ್ಯರಿಗೆ ನನ್ನ ಮನಃಪೂರ್ವಕ ಅಭಿವಂದನೆಗಳು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

**ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.**

**ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.**

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to **9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**
No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India
nagendracharya@yahoo.co.in
WhatsApp:  9901 551 491